ದಿನಾಂಕಃ 16.01.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರವಾಗಿ ಶ್ರೀ ಆರ್.ವಿ. ವಕೀಲರಿಂದಃ**

ನನ್ನ ತಂದೆ ಸೋಮಣ್ಣ ತೀರಿಕೊಂಡು15 ವರ್ಷಗಳು ಆಗಿವೆ. ನನ್ನ ತಂದೆಯವರಿಗೆ ನನ್ನ ಅಕ್ಕ ಚಂದ್ರಮ್ಮರವರು ಇದ್ದರು ಎಂದರೆ ಸರಿಯಲ್ಲ. ವಕೀಲ ರೇವಣ್ಣರವರ ಹೆಂಡತಿ ಚಂದ್ರಮ್ಮ ನನಗೆ ಗೊತ್ತಿದೆ. ಆ ಚಂದ್ರಮ್ಮನವರು ನನ್ನ ತಂದೆಯ ಅಕ್ಕ ಎಂದರೆ ಸರಿಯಲ್ಲ. ನನ್ನ ತಂದೆ ಸೋಮಣ್ಣ ಅವರ ತಂದೆ ಸುಬ್ಬಪ್ಪ ಎನ್ನುವುದು ನಿಜ. ಸ್ಬುಬ್ಬಪ್ಪನವರ ಅಣ್ಣ ಮಾದಪ್ಪ ಎನ್ನುವುದು ನಿಜ.ಮಾದಪ್ಪನವರಿಗೆ ಇಬ್ಬರು ಹೆಂಡತಿಯರು, ಬಸಮ್ಮ ಮತ್ತು ಸುಬ್ಬಮ್ಮ ಎನ್ನುವುದು ನನಗೆ ಗೊತ್ತಿಲ್ಲ. ಸುಬ್ಬಮ್ಮ ನವರು ಮಕ್ಕಳಿಲ್ಲದೇ ತೀರಿಕೊಂಡರು ಎನ್ನುವುದು ಗೊತ್ತಿಲ್ಲ. ವಕೀಲರಾದ ಬಸವಣ್ಣ ರವರಿಗೆ ಪ್ರತಿವಾದಿ ಮಾದಪ್ಪ ಒಬ್ಬನೇ ಮಗ ಎನ್ನುವುದು ನಿಜ. ಬಸವಣ್ಣರವರಿಗೆ ಮೂರು ಜನ ಹೆಣ್ಣು ಮಕ್ಕಳು ಎನ್ನುವುದು ನಿಜ. ಮಾದಪ್ಪ ಮತ್ತು ಸುಬ್ಬಪ್ಪರವರು 10.02.1955 ರಲ್ಲಿ ವಿಭಾಗ ಮಾಡಿಕೊಂಡಿದ್ದಾರೆ ಎನ್ನುವುದು ಗೊತ್ತಿಲ್ಲ. ದಾವಾ ಆಸ್ತಿಗಳು ಹೊರತುಪಡಿಸಿ ಬೇರೆ ಯಾವುದೇ ಆಸ್ತಿಗಳು ಇಲ್ಲ. ನನ್ನ ತಂದೆಯವರ ಹೆಸರಿನಲ್ಲಿ ಕೂಡ ಬೇರೆ ಯಾವುದೇ ಆಸ್ತಿಗಳು ಇಲ್ಲ. 2001 ರ ಪಹಣಿ ಪತ್ರಿಕೆಯನ್ನು ಹೊರತುಪಡಿಸಿ 2022ನೇ ವರ್ಷದ ಪಹಣಿ ಪತ್ರಿಕೆಯನ್ನು ಹಾಕಿದ್ದೇನೆ. ದಾವಾದ ಐಟಂ ನಂಬರ್ 1 ಸರ್ವೆ ನಂ. 521/1ರಲ್ಲಿ 1 ಎಕರೆ 9 ಗುಂಟೆ ಪೈಕಿ 24½ ಗುಂಟೆಯನ್ನು ನನ್ನ ಹೆಸರಿನಲ್ಲಿ ಪ್ರತ್ಯೇಕವಾಗಿ ಖಾತೆ ಆಗಿದೆ ಎಂದರೆ ಸರಿಯಲ್ಲ. ದಾವಾದ ಐಟಂ ನಂಬರ್ 2 ಸರ್ವೆ ನಂ. 564/5ರಲ್ಲಿ 4 ಗುಂಟೆ ಪೈಕಿ 2 ಗುಂಟೆ ನನ್ನ ಹೆಸರಿನಲ್ಲಿ ಪ್ರತ್ಯೇಕವಾಗಿ ಖಾತೆ ಆಗಿದೆ ಎಂದರೆ ಸರಿಯಲ್ಲ. ದಾವಾ 1 ಮತ್ತು 2ನೇ ಆಸ್ತಿಗಳಲ್ಲಿ ನನ್ನ ಭಾಗಾಂಶದ ಹಕ್ಕು ತೋರಿಸಿದ್ದರೂ ಕೂಡ ಉದ್ದೇಶಪೂರ್ವಕವಾಗಿ ಪಹಣಿ ಪತ್ರಿಕೆಗಳನ್ನು ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ದಾವಾದ ಐಟಂ ನಂಬರ್ 3 ಸರ್ವೆ ನಂ. 589/2ರಲ್ಲಿ 1 ಎಕರೆ 4 ಗುಂಟೆ ಪೂರ್ಣ ಜಮೀನನ್ನು ಮಾದಪ್ಪ ಮತ್ತು ಸುಬ್ಬಪ್ಪರವರ ವಿಭಾಗದಲ್ಲಿ ಮಾದಪ್ಪನವರ ಭಾಗಾಂಶಕ್ಕೆ ಬಂದಿದೆ ಎಂದರೆ ಸರಿಯಲ್ಲ. ನನ್ನ ಸ್ವಾಧಿನದಲ್ಲಿದೆ ಎಂದು ಸಾಕ್ಷಿ ಹೇಳುತ್ತಾರೆ. ಆ ಜಮೀನುಗಳಲ್ಲಿ ಉಳುಮೆ ಮಾಡಿದ್ದೇನೆ ಎಂದು ಹೇಳುತ್ತಾರೆ. ದಿಃ

09.06.1980 ನೋಂದಾಯಿತ ವಿಭಾಗ ಪತ್ರದ ಪ್ರಕಾರ ಮಾದಪ್ಪನವರು ತಮ್ಮ ಭಾಗಾಂಶದ ಆಸ್ತಿಯನ್ನು ಇಟ್ಟುಕೊಂಡರು ಎಂದರೆ ಸರಿಯಲ್ಲ.ಮಾದಪ್ಪ ನವರು ಪ್ರತಿವಾದಿ ಮಾದಪ್ಪನವರಿಗೆ ದಿಃ 03.07.2009ರಂದು ದಾವಾದ 3ನೇ ಸ್ವತ್ತನ್ನು ವಿಲ್ ಬರೆದಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿ ತಾತ ತೀರಿಕೊಂಡ ನಂತರ ಪ್ರತಿವಾದಿ ದಾವಾದ 3ನೇ ಸ್ವತ್ತಿಗೆ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ, ನಾನೇ ಸ್ವಾಧೀನದಲ್ಲಿದ್ದೇನೆ ಎಂದು ಹೇಳುತ್ತಾರೆ. ಪ್ರತಿವಾದಿ ದಾವಾದ 3ನೇ ಸ್ವತ್ತಿನಲ್ಲಿ ಅನ್ಯಕ್ರಾಂತ ಮಾಡಿ ಸೈಟ್‌ಗಳನ್ನು ಮಾಡಿದ್ದಾರೆ ಎನ್ನುವುದು ನಿಜ. ಪ್ರತಿವಾದಿ ಸೈಟ್ ಗಳನ್ನು ಮಾಡಿ ಅವರ ತಂಗಿಯರಾದ ಜಯಮ್ಮ ಮತ್ತು ಸುಶೀಲರವರಿಗೆ ತಲಾ ಒಂದು ಸೈಟನ್ನು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಅನ್ನಪೂರ್ಣರವರಿಗೆ ಆರು ಸೈಟುಗಳನ್ನು ಪ್ರತಿವಾದಿ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಮಹೇಶ್ ಕುಮಾರ್ ರವರಿಗೆ 2 ಸೈಟ್‌ಗಳನ್ನು ಮಾರಾಟ ಮಾಡಿದ್ದಾರೆ ಎನ್ನುವುದು ಗೊತ್ತಿಲ್ಲ. ದಾವಾದ 3ನೇ ಸ್ವತ್ತು ಬಡಾವಣೆಯಾಗಿದ್ದರೂ ಕೂಡ ನಾನು ವ್ಯವಸಾಯ ಮಾಡುತ್ತಿದ್ದೇನೆ ಎಂದು ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾದ ಐಟಂ ನಂ. 1 ಮತ್ತು 2ರಲ್ಲಿ ಭಾಗಾ ಆಗಿ ನನ್ನ ಭಾಗಾಂಶದ ಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದು, ದಾವಾದ 3ನೇ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು ಇಲ್ಲದಿದ್ದರೂ ಕೂಡ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ** : ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಸಿ.ಜೆ.ಎಂ., ಚಾಮರಾಜನಗರ.